

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25-09-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುರ್ಝ್, ತಅವ್ವುರ್ಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: "ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಫಜ್ರ್ ನಮಾಝಿನ ಸಮಯದಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರೊಡನೆ ಕೇಳಿದರು: ಹೇ ಬಿಲಾಲ್, ಅತ್ಯಂತ ಪ್ರತೀಕ್ಷೆಯಿರುವ ಯಾವ ಸತ್ಕರ್ಮವನ್ನು ನೀನು ಮುಸ್ಲಿಮನಾದ ನಂತರ ಮಾಡಿದ್ದೀಯ? ಏಕೆಂದರೆ ನಾನು ಸ್ವರ್ಗದಲ್ಲಿ ನನ್ನ ಮುಂದೆ ನಿನ್ನ ಹೆಜ್ಜೆಗಳ ಸಪ್ಪಳವನ್ನು ಕೇಳಿದೆ. ಹಝ್ರತ್ ಬಿಲಾಲ್ ಹೇಳಿದರು: 'ನಾನು ಹಗಲು–ರಾತ್ರಿ ಸಮಯಗಳಲ್ಲಿ ವುಝೂ ಮಾಡಿದ ನಂತರ ನನಗೆ ಸಾಧ್ಯವಾದಷ್ಟು ನಫ್ಲ್ ನಮಾಝ್ ನಿರ್ವಹಿಸುತ್ತೇನೆ."

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: "ನನ್ನನ್ನು ಸ್ವರ್ಗಕ್ಕೆ ರಾತ್ರಿ ಸಮಯದಲ್ಲಿ ಕೊಂಡುಹೋಗಲಾದಾಗ, ನನಗೆ ಹೆಜ್ಜೆಗಳ ಸಪ್ಪಳ ಕೇಳಿಬಂತು. ಈ ಸಪ್ಪಳದ ಶಬ್ದ ಯಾರದ್ದು ಎಂದು ನಾನು ಜಿಬ್ರೀಲ್ ಅಲೈಹಿಸ್ಸಲಾಮರೊಡನೆ ಕೇಳಿದೆ. ಅದು ಬಿಲಾಲ್‌ರದ್ದು ಎಂದು ಜಿಬ್ರೀಲ್ ಹೇಳಿದರು. ಈ ದಿವ್ಯದರ್ಶನದ ವಿವರಣೆಯನ್ನು ಕೇಳಿದಾಗ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಬಿಲಾಲ್‌ರ ತಾಯಿ ಗರ್ಭದಿಂದ ಜನಿಸಿದ್ದರೆ ಎಷ್ಟು ಚೆನ್ನಾಗಿತ್ತು! ಬಿಲಾಲಿನ ತಂದೆ ನನ್ನ ತಂದೆಯಾಗಿದ್ದರೆ ಮತ್ತು ನಾನು ಬಿಲಾಲ್‌ನ ಹಾಗೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು!"

ಒಂದು ಕಾಲದಲ್ಲಿ ಕೀಳಾಗಿ ಭಾವಿಸುತ್ತಾ ಕಲ್ಲುಗಳ ಮೇಲೆ ಎಳೆಯಲ್ಪಡುತ್ತಿದ್ದ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಸ್ಥಾನ ಎಷ್ಟು ಉನ್ನತವಾಗಿದೆ. 'ನಾನು ಬಿಲಾಲ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು' ಎಂದು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಬಯಸುತ್ತಾರೆ.

ಒಂದು ಸಂದರ್ಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಸ್ತ್ರೀಯರನ್ನು ಸಂಬೋಧಿಸಿ ಹೇಳಿದರು: "ಅಲ್ಲಾಹನಿಗಾಗಿ ಮಾಡುವ ಕೆಲಸಗಳು ಶಾಶ್ವತವಾಗಿರುವುವು. ಹಝ್ರತ್ ಬಿಲಾಲ್‌ರ ಮಕ್ಕಳು ಎಲ್ಲಿರುವರು ಎಂದೂ ಅವರಿಗೆ ಮಕ್ಕಳು ಇರುವರೇ ಎಂದೂ ನಮಗೆ ಗೊತ್ತಿಲ್ಲ. ಅದೇ ರೀತಿಯಲ್ಲಿ ಅವರ ಮನೆ ಎಲ್ಲಿದೆ ಮತ್ತು ಅವರ ಸೊತ್ತುಗಳು ಎಲ್ಲಿವೆ ಎಂದೂ ನಮಗೆ ತಿಳಿದಿಲ್ಲ. ಆದರೆ ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಸೀದಿಯಲ್ಲಿ ನೀಡಿದ ಅಧ್ಹಾನ್ ಈಗಲೂ ಬಾಕಿಯಿದೆ. ಶಾಶ್ವತವಾಗಿರುವಂತಹ ಒಳಿತುಗಳು ಇವೇ ಆಗಿವೆ.

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರಿಂದ 44 ಹದೀಸುಗಳು ವರದಿಯಾಗಿವೆ. ಬುಖಾರಿ ಮತ್ತು ಮುಸ್ಲಿಮ್‌ನಲ್ಲಿ ನಾಲ್ಕು ವರದಿಗಳು ಬಂದಿವೆ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: "ಮೂರು ವ್ಯಕ್ತಿಗಳನ್ನು ಸ್ವರ್ಗವು ಹಂಬಲದಿಂದ ಪ್ರತೀಕ್ಷಿಸುತ್ತಿದೆ. ಅವರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು, ಹಝ್ರತ್ ಅಮ್ಮಾರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಆಗಿರುವರು." ಒಂದು ಸಲ ಹಝ್ರತ್ ಉಮರ್ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಶ್ರೇಷ್ಠತೆಯನ್ನು ವಿವರಿಸುತ್ತಿದ್ದರು. ಅವರು ಹಝ್ರತ್ ಅಬೂಬಕ್ಕರ್‌ರವರ ಸದ್ಗುಣಗಳನ್ನು ವಿವರಿಸುತ್ತಾ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಕಡೆಗೆ ಬೊಟ್ಟುಮಾಡಿ ಹೀಗೆ ಹೇಳಿದರು: "ಇವರು ಬಿಲಾಲ್ ಆಗಿರುವರು, ಇವರು ನಮ್ಮ ನೇತಾರರಾಗಿರುವರು ಮತ್ತು ಹಝ್ರತ್ ಅಬೂಬಕ್ಕರ್‌ರವರ ಸತ್ಕರ್ಮಗಳಲ್ಲಿ ಒಂದಾಗಿರುವರು. ಏಕೆಂದರೆ, ಹಝ್ರತ್ ಬಿಲಾಲ್‌ರನ್ನು ಹಝ್ರತ್ ಅಬೂಬಕ್ಕರ್ ಸ್ವತಂತ್ರಗೊಳಿಸಿದ್ದರು."

ಆಇಝ್ ಬಿನ್ ಅಮ್ರ್ ವರದಿ ಮಾಡುತ್ತಾರೆ: ಹಝ್ರತ್ ಸಲ್ಮಾನ್, ಹಝ್ರತ್ ಸುಹೈಬ್ ಮತ್ತು ಹಝ್ರತ್ ಬಿಲಾಲ್‌ರ ಕುರಿತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಹೇ ಅಬೂಬಕ್ಕರ್ ನೀನು ಅವರನ್ನು ಬೇಸರಗೊಳಿಸಿದ್ದರೆ, ಖಂಡಿತವಾಗಿಯೂ ಅದು ಅಲ್ಲಾಹನ ಕೋಪಕ್ಕೆ ಕಾರಣವಾಗುವುದು." ಹಝ್ರತ್ ಅಬೂ ಮೂಸಾ ವರದಿ ಮಾಡುತ್ತಾರೆ: "ಒಬ್ಬ ಮರಳುಗಾಡಿನ ಅರಬನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾಗಿ ಹೇಳಿದನು: ನೀವು ನನ್ನೊಡನೆ ಮಾಡಿದ ವಾಗ್ದಾನವನ್ನು ಈಡೇರಿಸುವುದಿಲ್ಲವೇ? ನಿನಗೆ ಸುವಾರ್ತೆ ಇದೆ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ಹೀಗೆ ನೀವು ಬಹಳ ಸಲ ಹೇಳಿದ್ದೀರಿ ಎಂದು ಆ ಅರಬನು ಹೇಳಿದನು. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಮೂಸಾ ಮತ್ತು ಹಝ್ರತ್ ಬಿಲಾಲ್‌ರೊಡನೆ ಹೇಳಿದರು: ಇವನು ಸುವಾರ್ತೆಯನ್ನು ರದ್ದು ಮಾಡಿರುವನು. ಆದ್ದರಿಂದ ನೀವಿಬ್ಬರು ಈ ಸುವಾರ್ತೆಯನ್ನು ಸ್ವೀಕರಿಸಿರಿ. ಯಾ ರಸೂಲುಲ್ಲಾಹ್, ನಾವು ಸ್ವೀಕರಿಸುತ್ತೇವೆ ಎಂದು ಅವರಿಬ್ಬರೂ ಹೇಳಿದರು. ಅನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು

ನೀರಿರುವ ಒಂದು ಪಾತ್ರೆಯನ್ನು ತರಿಸಿದರು. ಅದರಿಂದ ತನ್ನ ಎರಡು ಕೈಗಳನ್ನು ಮತ್ತು ಮುಖವನ್ನು ತೊಳೆದರು ಹಾಗೂ ಬಾಯಿ ಮುಕ್ಕಳಿಸಿದರು. ಬಾಕಿಯಿರುವ ನೀರನ್ನು ಕುಡಿಯಲು ಮತ್ತು ಮುಖಗಳ ಮತ್ತು ಎದೆಯ ಮೇಲೆ ಹೊಯ್ದು ಸಂತೋಷಗೊಳ್ಳಲು ಅವರಿಬ್ಬರೊಡನೆ ಹೇಳಿದರು. ಹೀಗೆ ಅವರಿಬ್ಬರೂ ಆ ಪಾತ್ರೆಯನ್ನು ಪಡೆದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆದೇಶಿಸಿದಂತೆ ಮಾಡಿದರು. ಆಗ ಮರೆಯಾಗಿ ನಿಂತಿದ್ದ ಹಝ್ರತ್ ಉಮ್ಮೇ ಸಲ್ಮಾ ರಝಿಯಲ್ಲಾಹು ಅನ್‌ಹ ಅವರನ್ನು ಕರೆದು ಹೇಳಿದರು: ನಿಮ್ಮಿಬ್ಬರ ಪಾತ್ರೆಯಲ್ಲಿ ಸ್ವಲ್ಪ ನೀರನ್ನು ನಿಮ್ಮ ತಾಯಿಗೂ ಬಾಕಿಯಾಗಿರಿಸಿರಿ. ಎಂದರೆ ಸತ್ಯವಿಶ್ವಾಸಿಗಳ ತಾಯಿಗಾಗಿಯೂ ಅಲ್ಪ ಬಾಕಿಯಿರಿಸಿರಿ. ಹೀಗೆ ಅವರಿಬ್ಬರೂ ಹಝ್ರತ್ ಉಮ್ಮೇ ಸಲ್ಮಾರಿಗಾಗಿ ಸ್ವಲ್ಪ ನೀರನ್ನು ಬಾಕಿಯಿರಿಸಿದರು."

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: "ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು – ಅಲ್ಲಾಹನು ಪ್ರತಿ ಪ್ರವಾದಿಗೆ ಏಳು ದೂತರನ್ನು ನೀಡಿದ್ದಾನೆ. ನನಗೆ ಅಲ್ಲಾಹನು 14 ದೂತರನ್ನು ನೀಡಿದ್ದಾನೆ." ಅವರು ಯಾರೆಲ್ಲ ಎಂದು ಕೇಳಲಾಯಿತು. ಹಝ್ರತ್ ಅಲಿ ಹೇಳಿದರು: "ನನ್ನ ಎರಡು ಮಕ್ಕಳು, ಜಾಫರ್, ಹಂಝ, ಅಬೂಬಕ್ಕರ್, ಉಮರ್, ಮುಸ್‌ಅಬ್ ಬಿನ್ ಉಮೈರ್, ಬಿಲಾಲ್, ಸಲ್ಮಾನ್, ಮಿಖ್‌ದಾದ್, ಅಬೂಧರ್, ಅಮ್ಮಾರ್ ಮತ್ತು ಅಬ್ದುಲ್ಲಾಹ್ ಬಿನ್ ಮಸ್‌ಊದ್."

ಹಝ್ರತ್ ಝೈದ್ ಬಿನ್ ಅರ್‌ಕಮ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಬಿಲಾಲ್ ಎಂತಹ ಉತ್ತಮ ಮನುಷ್ಯನಾಗಿರುವನು. ಅವರು ಎಲ್ಲ ಮುಅಧ್ದಿನ್‌ರ ನೇತಾರರಾಗಿರುವರು. ಅವರನ್ನು ಅಧಾನ್ ನೀಡುವವರೇ ಹಿಂಬಾಲಿಸುವರು ಮತ್ತು ಖಿಯಾಮತ್ ದಿನದಂದು ಅತ್ಯಂತ ಉದ್ದ ಕುತ್ತಿಗೆಯವರು ಮುಅಧ್ದಿನ್‌ಗಳಾಗಿರುವರು." ಹಝ್ರತ್ ಝೈದ್ ಬಿನ್ ಅರ್‌ಕಮ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹ ಅಲೈಹಿ ವಸಲ್ಲಮರು ಹೇಳಿದರು: "ಬಿಲಾಲ್ ಎಂತಹ ಉತ್ತಮ ಮನುಷ್ಯನಾಗಿರುವನು. ಅವರು ಶಹೀದರ ಮತ್ತು ಮುಅಧ್ದಿನ್‌ರ ಸರದಾರರಾಗಿರುವರು ಮತ್ತು ಖಿಯಾಮತ್ ದಿನದಂದು ಎಲ್ಲರಿಗಿಂತ ಉದ್ದ ಕುತ್ತಿಗೆಯವರು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಆಗಿರುವರು." ಎಂದರೆ ಬಹಳ ಆದರಣೀಯ ಸ್ಥಾನ ಅವರಿಗೆ ಲಭಿಸುವುದು.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಹಝ್ರತ್ ಬಿಲಾಲ್‌ರಿಗೆ ಸ್ವರ್ಗದ ಒಂಟೆಗಳಲ್ಲಿ ಒಂದು ಒಂಟೆಯನ್ನು ಕೊಡಲಾಗುವುದು. ಅವರು ಅದರಲ್ಲಿ ಸವಾರರಾಗುವರು." ಹಝ್ರತ್ ಬಿಲಾಲ್‌ರ ಪತ್ನಿ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ನನ್ನಿಂದ ನಿಮಗೆ ಬಿಲಾಲ್ ತಲುಪಿಸುವ ಪ್ರತಿಯೊಂದು ಮಾತು ಖಂಡಿತವಾಗಿಯೂ ಸತ್ಯವಾಗಿರುವುದು. ಬಿಲಾಲ್ ನಿಮ್ಮೊಡನೆ ತಪ್ಪು ಮಾತನ್ನು ಹೇಳಲಾರರು.. ಆದ್ದರಿಂದ ಬಿಲಾಲ್‌ರೊಡನೆ ಎಂದೂ ಅಸಂತುಷ್ಟಗೊಳ್ಳಬಾರದು. ಏಕೆಂದರೆ, ಬಿಲಾಲ್ ನಿಮ್ಮೊಡನೆ ಬೇಸರಗೊಂಡಿರುವ ತನಕ ನಿಮ್ಮ ಯಾವುದೇ ಕರ್ಮಗಳು ಸ್ವೀಕರಿಸಲ್ಪಡದು."

ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: "ಬಿಲಾಲ್‌ರ ಸ್ಥಿತಿ ಜೇನುನೊಣದ ಹಾಗೆ ಆಗಿದೆ. ಅದು ಸಿಹಿ ಹಣ್ಣುಗಳಿಂದ ಮತ್ತು ಕಹಿಯಾದ ಗಿಡಗಳಿಂದ ರಸವನ್ನು ಹೀರುತ್ತದೆ. ಆದರೆ ಜೇನುತುಪ್ಪ ತಯಾರಾಗುವಾಗ ಸಂಪೂರ್ಣವಾಗಿ ಸಿಹಿಯಾಗಿರುತ್ತದೆ." ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಪತ್ನಿ ಹೇಳುತ್ತಾರೆ: ಹಝ್ರತ್ ಬಿಲಾಲ್ ಹಾಸಿಗೆಯಲ್ಲಿ ಮಲಗಲು ಹೋಗುವಾಗ ಹೀಗೆ ದುಆ ಮಾಡುತ್ತಿದ್ದರು – "ಹೇ ಅಲ್ಲಾಹ್, ನೀನು ನನ್ನ ತಪ್ಪುಗಳನ್ನು ಕ್ಷಮಿಸು ಮತ್ತು ನನ್ನ ಕೊರತೆಗಳನ್ನು ನಾನೊಬ್ಬ ದುರ್ಬಲನೆಂದು ತಿಳಿದುಕೊಂಡು ಕಡೆಗಣಿಸು."

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಹೇ ಬಿಲಾಲ್, ಬಡತನದಲ್ಲಿ ಮರಣ ಹೊಂದು; ಧನಿಕನಾಗಿ ಮರಣ ಹೊಂದಬೇಡ. ಇದು ಹೇಗೆ ಸಾಧ್ಯವೆಂದು ತಿಳಿಯುತ್ತಿಲ್ಲ ಎಂದು ನಾನು ಹೇಳಿದೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿನಗೆ ಸಿಗುವ ಸಂಪತ್ತನ್ನು ಶೇಖರಿಸಿ ಇಡಬೇಡ, ನಿನ್ನೊಡನೆ ಯಾರಾದರೂ ಬೇಡಿದರೆ, ಕೊಡದೇ ಇರಬೇಡ. ಹೀಗೆ ಮಾಡಲು ಸಾಧ್ಯವಾಗದಿದ್ದರೆ ಏನು ಮಾಡಬೇಕೆಂದು ನಾನು ಕೇಳಿದೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೀಗೆಯೇ ಮಾಡಬೇಕು, ಇಲ್ಲದಿದ್ದರೆ ನರಕ ನಿನ್ನ ವಾಸಸ್ಥಳವಾಗುವುದು." ಎಂದರೆ ಬೇಡುವ ಯಾರನ್ನೂ ಹಿಯಾಳಿಸಬಾರದು. ಸಂಪತ್ತನ್ನು ಶೇಖರಿಸುವುದು ಮಾತ್ರವಲ್ಲ, ಅದನ್ನು ದಾನ ಸಹ ಮಾಡಬೇಕು.

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಉಮರ್‌ರ ಖಿಲಾಫತ್ ಕಾಲದಲ್ಲಿ, ಹಿಜರಿ ವರ್ಷ ಇಪ್ಪತ್ತರಲ್ಲಿ ಸಿರಿಯಾದ ಡಮಸ್ಕಸ್ ಪಟ್ಟಣದಲ್ಲಿ ನಿಧನರಾದರು. ಕೆಲವರು ಅವರು ಹಲಬ್ ಪಟ್ಟಣದಲ್ಲಿ ಮರಣ ಹೊಂದಿದ್ದರು ಎಂದು ಅಭಿಪ್ರಾಯಪಟ್ಟಿದ್ದಾರೆ. ಆ ಸಮಯದಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ವಯಸ್ಸು ಅರುವತ್ತಕ್ಕೆ ಮೇಲಾಗಿತ್ತು. ಹಿಜರಿ 18ಕ್ಕೆ ನಿಧನರಾದರು ಎಂದು ಸಹ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅವರನ್ನು ಡಮಸ್ಕಸಿನ ಖಬರ್‌ಸ್ತಾನದಲ್ಲಿ ಬಾಬುಸ್ಸಗೀರಿನ ಸಮೀಪ ದಫನ್ ಮಾಡಲಾಯಿತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಡಮಸ್ಕಸಿನಲ್ಲಿ ಒಂದು ದಿನ ಕೆಲವು ಜನರು ಒಟ್ಟುಗೂಡಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಸಹ ಆ ದಿನಗಳಲ್ಲಿ ಡಮಸ್ಕಸಿಗೆ ಬಂದಿದ್ದರು. ಹಝ್ರತ್ ಬಿಲಾಲ್‌ರೊಡನೆ ಅಧಾನ್ ಕೊಡಲು ಹೇಳುವಂತೆ ಹಝ್ರತ್ ಉಮರ್‌ರೊಡನೆ ಜನರು ವಿನಂತಿಸಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಬಿಲಾಲ್‌ರನ್ನು ಕರೆದು ಹೇಳಿದರು: ನೀವು ಅಧಾನ್ ನೀಡಬೇಕೆಂದು ಜನರು ಬಯಸುತ್ತಿದ್ದಾರೆ.

ಹಝ್ರತ್ ಬಿಲಾಲ್ ಹೇಳಿದರು: ನೀವು ಖಲೀಫರಾಗಿದ್ದೀರಿ. ನೀವು ಬಯಸುವುದಾದರೆ, ನಾನು ಅಧ್ಹಾನ್ ನೀಡುತ್ತೇನೆ. ಆದರೆ ನನಗೆ ಮನಸ್ಸು ಬರುತ್ತಿಲ್ಲ. ಕೊನೆಗೆ ಹಝ್ರತ್ ಬಿಲಾಲ್ ನಿಂತುಕೊಂಡು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಅಧ್ಹಾನ್ ನೀಡುತ್ತಿದ್ದ ರೀತಿಯಲ್ಲೇ ಉಚ್ಚಸ್ವರದಲ್ಲಿ ಅಧ್ಹಾನ್ ನೀಡಿದರು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅಧ್ಹಾನ್ ನೀಡುತ್ತಾ ಹೋದರು. ಅದನ್ನು ಕೇಳುತ್ತಿದ್ದ ಜನರ ಹೃದಯಗಳು ಆವೇಶಭರಿತವಾಗುತ್ತಿತ್ತು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅಧ್ಹಾನ್ ನೀಡಿದ ನಂತರ ಮೂರ್ಛೆ ಹೋದರು ಮತ್ತು ಕೆಲವು ನಿಮಿಷಗಳಲ್ಲಿ ನಿಧನರಾದರು. ಇದು ಅರಬ್ ಮತ್ತು ಅರಬಿಯೇತರಲ್ಲಿ ಯಾವುದೇ ವ್ಯತ್ಯಾಸವಿಲ್ಲವೆಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರ ನಿಜವಾದ ಸಾಕ್ಷಿಯಾಗಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ನೇಹಭರಿತ ಸ್ವರವನ್ನು ಕೇಳಿದ ಅರಬ್ ಸಮುದಾಯದವರಲ್ಲದ ಒಬ್ಬ ವ್ಯಕ್ತಿಯ ಕರ್ಮಪರವಾದ ಸಾಕ್ಷಿಯಾಗಿತ್ತು ಇದು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರೀತಿಸಿದ ರೀತಿಯಲ್ಲಿ ತನ್ನ ಸ್ವಂತ ಸಮುದಾಯ ಕೂಡ ಪ್ರೀತಿಸಲಿಕ್ಕಿಲ್ಲ ಎಂದು ಅವರು ಮನವರಿಕೆ ಮಾಡಿದ್ದರು.

ಇವರಾಗಿದ್ದರು ನಮ್ಮ ಸಯ್ಯದುನಾ ಬಿಲಾಲ್. ಅವರು ತಮ್ಮ ನೇತಾರರಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿಧೇಯರಾಗಿದ್ದರು ಮತ್ತು ಅವರನ್ನು ಪ್ರೀತಿಸಿದ್ದರು. ಏಕದೇವ ವಿಶ್ವಾಸವನ್ನು ತಮ್ಮ ಹೃದಯದಲ್ಲಿ ಇರಿಸಿದ್ದರು ಮತ್ತು ನಮಗೆ ಮಾದರಿಯಾಗುವಂತಹ ಪರಿಶುದ್ಧವಾದ ಸತ್ಕರ್ಮಗಳನ್ನು ನೆಲೆನಿಲ್ಲಿಸಿದರು. ಅದೇ ರೀತಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಗುಲಾಮನೊಂದಿಗೆ ತೋರಿಸಿದ ಪ್ರೀತಿ ಮತ್ತು ಪ್ರೇಮದ ಅತುಲ್ಯವಾದ ವೃತ್ತಾಂತಗಳ ಉದಾಹರಣೆಗಳು ನಮಗೆ ಲೋಕದಲ್ಲಿ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಇದೇ ಇಂದು ಸಹ ಪ್ರೀತಿ ಮತ್ತು ಪ್ರೇಮದ ವಾತಾವರಣವನ್ನು ಸೃಷ್ಟಿಸುವುದು, ಸಾಹೋದರ್ಯವನ್ನು ಉಂಟುಮಾಡುವುದು ಮತ್ತು ದಾಸ್ಯದ ಸರಪಳಿಗಳನ್ನು ತುಂಡರಿಸುವುದು. ಒಟ್ಟಿನಲ್ಲಿ, ಮೋಕ್ಷ ಸಿಗಬೇಕಾದರೆ ಏಕದೇವ ವಿಶ್ವಾಸ ಮತ್ತು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲರ ಈ ಮಾದರಿಗಳನ್ನು ಇಂದು ಸಹ ನಾವು ಸ್ಥಾಪಿಸಬೇಕಾಗಿದೆ. ಅಲ್ಲಾಹನು ನಮಗೆ ಅದರ ಸೌಭಾಗ್ಯವನ್ನು ನೀಡಲಿ. ಆಮೀನ್.

(ಖುತ್‌ಬದ ಕೊನೆಯಲ್ಲಿ ಹುಝೂರ್, ಇತ್ತೀಚೆಗೆ ನಿಧನರಾದ ಸನ್ಮಾನ್ಯ ತಯ್ಯಬ್ ಯಾಖೂಬ್ ಸಾಹಿಬರ ಮಗನಾದ ಮೌಲಾನ ತಾಲಿಬ್ ಯಾಖೂಬ್ ಸಾಹಿಬ್ ಮುಬಲ್ಲಿಗ್ ಟ್ರಿನಿಡಾಡ್, ಮಾಜಿ ತೃತೀಯ ವಕೀಲುಲ್ ಮಾಲ್ ಮತ್ತು ರಬ್ವದ ನಾಇಬ್ ಸದರ್ ಮಜ್‌ಲಿಸ್ ತಹ್‌ರೀಕ್ ಜದೀದ್ ಆಗಿದ್ದ ಸನ್ಮಾನ್ಯ ಇಫ್ತಿಖ್ಹಾರ್ ಅಲಿ ಖುರೈಶಿ ಸಾಹಿಬ್, ಪಾಕಿಸ್ತಾನದ ಮೌಲವಿ ಹಕೀಂ ಖುರ್ಶಿದ್ ಸಾಹಿಬ್‌ರ ಪತ್ನಿಯಾದ ರಝಿಯಾ ಸುಲ್ತಾನ ಸಾಹಿಬ, ಮುಹಮ್ಮದ್ ಮನ್ಸೂರ್ ಅಹ್ಮದ್ ಸಾಹಿಬರ ಮಗನಾದ ಖಾದಿಯಾನಿನ ನಾಇಬ್ ನಾಝಿರ್ ಬೈತುಲ್ ಮಾಲ್ ಮುಹಮ್ಮದ್ ತಾಹಿರ್ ಸಾಹಿಬ್ ಮತ್ತು ಜಾಮಿಅ ಘಾನದ ಅಧ್ಯಾಪಕರಾದ ಮಿರ್ಝಾ ಖಲೀಲ್ ಅಹ್ಮದ್ ಬೇಗ್ ಸಾಹಿಬರ ಮಗನಾದ ಅಖೀಲ್ ಅಹ್ಮದ್ ಸಾಹಿಬರ ಒಳಿತುಗಳನ್ನು ವಿವರಿಸುತ್ತಾ ಅವರ ಜನಾಝ ಗ್ಹಾಇಬ್ ನಿರ್ವಹಿಸುವುದಾಗಿ ಘೋಷಿಸಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 25-09-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon